# ದೊಡ್ಡ ಕೆಂಪು ನೀರು ಹಕ್ಕಿ (ರಾಜಹಂಸ)



### ಇದೀಗ ಸುದ್ದಿಯಲ್ಲಿದೆ:

ಆಂಧ್ರಪ್ರದೇಶದ ಕಾಕಿನಾಡ ಕೊಲ್ಲಿಯ ಕೋರಿಂಗಾ ವನ್ಯಜೀವಿ ಧಾಮದಲ್ಲಿರುವ ಹೋಪ್ ದ್ವೀಪದಲ್ಲಿ ಇದೇ ಮೊದಲ ಬಾರಿಗೆ ಸುಮಾರು 70 ರಾಜಹಂಸ (ಗ್ರೇಟರ್ ಫ್ಲೆಮಿಂಗೊ) ಪಕ್ಷಿಗಳು ಕಂಡುಬಂದಿವೆ.

## ದೊಡ್ಡ ಕೆಂಪು ನೀರು ಹಕ್ಕಿ

(ಗ್ರೇಟರ್ ಫ್ಲೆಮಿಂಗೊ)ಗಳ ಬಗ್ಗೆ:



### ವೈಜ್ಞಾನಿಕ ಹೆಸರು:-

ದೊಡ್ಡ ಕೆಂಪು ನೀರು ಹಕ್ಕಿ ಕುಟುಂಬದಲ್ಲಿಯೇ ಅತಿದೊಡ್ಡ ಪ್ರಭೇದವಾಗಿದೆ:- ಇದು ಸರಾಸರಿ 110–150 ಸೆಂ.ಮೀ. ಎತ್ತರವಿದ್ದು, 2–4 ಕೆ.ಜಿ. ತೂಕ ವಿರುತ್ತದೆ ಮತ್ತು ಅತ್ಯಂತ ವ್ಯಾಪಕವಾಗಿ ಹರಡಿರುವ ಪ್ರಭೇದವಾಗಿದೆ.

**ಸರಾಸರಿ ಜೀವಿತಾವಧಿ:-** 30–40 ವರ್ಷಗಳು

**ಆಹಾರ:-** ಸಣ್ಣ ಮೀನುಗಳು ಮತ್ತು ಇತರೆ ಜಲಚರ ಜೀವಿಗಳು.



### ಗುಜರಾತಿನ ರಾಜ್ಯ ಪಕ್ಷಿ:-

ಗ್ರೇಟರ್ ಫ್ಲೆಮಿಂಗೊ ಗುಜರಾತಿನ ರಾಜ್ಯ ಪಕ್ಷಿಯಾಗಿದೆ.

### ಹಂಚಿಕೆ:-

ಉತ್ತರ (ಕರಾವಳಿ) ಮತ್ತು ಸಹಾರಾ ಮರುಭೂಮಿಯ ದಕ್ಷಿಣ ಭಾಗದಲ್ಲಿರುವ ಆಫ್ರಿಕಾ ಪ್ರದೇಶ, ಭಾರತೀಯ ಉಪಖಂಡ (ಹಿಮಾಲಯದ ದಕ್ಷಿಣಕ್ಕೆ), ಮಧ್ಯಪ್ರಾಚ್ಯ, ಪರ್ಷಿಯನ್ ಕೊಲ್ಲಿ, ಏಡನ್ ಕೊಲ್ಲಿ, ಕೆಂಪು ಸಮುದ್ರ ಮತ್ತು ದಕ್ಷಿಣ ಯುರೋಪಿನ ಮೆಡಿಟರೇನಿಯನ್ ದೇಶಗಳಲ್ಲಿ ಕಂಡುಬರುತ್ತವೆ.



ದೊಡ್ಡ ಕೆಂಪು ನೀರು ಹಕ್ಕಿಗಳು ಸಾಮಾನ್ಯವಾಗಿ ಇಸ್ರೇಲ್, ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬರುತ್ತವೆ.

### ಅಪಾಯಗಳು:-

ಬ್ಯಾಕ್ಟೀರಿಯಾ, ವಿಷಕಾರಿ ವಸ್ತುಗಳು, ಆವಾಸಸ್ಥಾನದ ನಾಶ ಮತ್ತು ನೀರಿನ ಪೂರೈಕೆಯಲ್ಲಿನ ಮಾಲಿನ್ಯವಾಗಿದೆ. ಈ ಮಾಲಿನ್ಯವು ಸಾಮಾನ್ಯವಾಗಿ ಉತ್ಪಾದನಾ ಕಂಪನಿಗಳಿಂದ ಹರಿದುಬರುವ ತ್ಯಾಜ್ಯದಿಂದ ಉಂಟಾಗುತ್ತದೆ.

## ನೀರು ಹಕ್ಕಿಯ ವಿಧಗಳು ಮತ್ತು IUCN ಕೆಂಪು ಪಟ್ಟಿಯಲ್ಲಿ ಸ್ಥಿತಿಗತಿ:

| | | |
|---|---|---|
| ದೊಡ್ಡ ಕೆಂಪು ನೀರು ಹಕ್ಕಿ/ರಾಜಹಂಸ (ಗ್ರೇಟರ್ ಫ್ಲೆಮಿಂಗೊ) – ಕನಿಷ್ಠ ಕಾಳಜಿ (LC) | ಚಿಲಿಯ ನೀರು ಹಕ್ಕಿ (ಫ್ಲೆಮಿಂಗೊ) – ಅಪಾಯದ ಅಂಚಿನಲ್ಲಿರುವ (NT) | ಅಮೆರಿಕಾದ ನೀರು ಹಕ್ಕಿ (ಫ್ಲೆಮಿಂಗೊ) – ಕನಿಷ್ಠ ಕಾಳಜಿ (LC) |
| ಸಣ್ಣ ಕೆಂಪು ನೀರು ಹಕ್ಕಿ (ಲೆಸ್ಸರ್ ಫ್ಲೆಮಿಂಗೊ) – ಅಪಾಯದ ಅಂಚಿನಲ್ಲಿರುವ (NT) | ಆಂಡೀಸ್ ಪರ್ವತ ಪ್ರದೇಶದ ನೀರು ಹಕ್ಕಿ (ಫ್ಲೆಮಿಂಗೊ) – ದುರ್ಬಲ (VU) | ಜೇಮ್ಸ್ ನೀರು ಹಕ್ಕಿ (ಫ್ಲೆಮಿಂಗೊ) – ಅಪಾಯದ ಅಂಚಿನಲ್ಲಿರುವ (NT) |